RNU AIR DHARWAD

# DECEMBER 23, 2024

## AKASHAVANI - DHARWAD

## PRADESH SAMACHARA (KANNADA) 07.05 A.M.

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು:**

<><><>

- ಜನ ಸಹಭಾಗಿತ್ವದಲ್ಲಿ ಅರಣ್ಯ ನಿರ್ವಹಣೆಯ ಮಾದರಿ, ಉತ್ತರಕನ್ನಡ ಜಿಲ್ಲೆ, ಹಳಕಾರ ಗ್ರಾಮ ಅರಣ್ಯ ಪಂಚಾಯ್ತಿಗೆ, ಶತಮಾನೋತ್ಸವ.
- ಶರಾವತಿ ಕಣಿವೆಯಲ್ಲಿ, ಬೃಹತ್ ಯೋಜನೆ ಅನುಮೋದಿಸದಂತೆ, ಪರಿಸರ ವಿಜ್ಞಾನಿಗಳ ಆಗ್ರಹ.
- 'ಹೆಣ್ಣು ಮಗುವೊಂದು ಕಲಿತರೆ, ಶಾಲೆಯೊಂದು ತೆರೆದಂತೆ' – ಕೇಂದ್ರ ಸಚಿವ ಪ್ರಲ್ಹಾದ ಜೋಶಿ.
- ರಾಜ್ಯದ ಅಲೆಮಾರಿ ಹಾಗೂ ಅರೆ ಅಲೆಮಾರಿ ಸಮುದಾಯಗಳಿಗೆ, ಸ್ವಾವಲಂಬಿ ಬದುಕು; ಅಲೆಮಾರಿ ಅಭಿವೃದ್ಧಿ ನಿಗಮದ ಸಂಕಲ್ಪ.

<><><>

**ಈಗ ವಾರ್ತೆಗಳ ವಿವರ**

<><><>

**ಡೆಸ್ಕ್ ರಿಪೋರ್ಟ್ /ಹಳಕಾರ/ಗ್ರಾಮ**

ರಾಜ್ಯದಲ್ಲೇ ವಿಶಿಷ್ಟವಾದ, ಜನ ಸಹಭಾಗಿತ್ವದ ಅರಣ್ಯ ಸಂರಕ್ಷಣಾ ಪದ್ಧತಿ ಪಾಲಿಸಿಕೊಂಡು, 100 ವರ್ಷ ಪೂರೈಸಿರುವ, ಉತ್ತರಕನ್ನಡ ಜಿಲ್ಲೆ ಕುಮಟಾ ತಾಲೂಕು ಹಳಕಾರ ಗ್ರಾಮದಲ್ಲಿ, ಗ್ರಾಮ ಅರಣ್ಯ ಪಂಚಾಯತ್ ಶತಮಾನೋತ್ಸವ ಸಂಭ್ರಮ ನಿನ್ನೆ ಜರುಗಿತು.

<><><>

ಈ ಕುರಿತು ಒಂದು ವರದಿ, ಧಾರವಾಡ ಪ್ರಾದೇಶಿಕ ಸುದ್ದಿ ವಿಭಾಗದ, ಸಂಪಾದಕೀಯ ಕಾರ್ಯನಿರ್ವಾಹಕ ವಿವೇಕ ಆದಿತ್ಯ ಕನಿಯಾಲ ಅವರಿಂದ..

<><><>

ವಿವೇಕ ಆದಿತ್ಯ ಕನಿಯಾಲ ಧ್ವನಿ 45 ಸೆಕೆಂದುಗಳು

<><><>

*ಉತ್ತರ ಕನ್ನಡ ಜಿಲ್ಲೆಯಲ್ಲಿ 50 ಸಾವಿರ ಹೆಕ್ಟೆರ್ ಬೆಟ್ಟ ಅರಣ್ಯ ಗ್ರಾಮಗಳ ರೈತರ ನಿರ್ವಹಣೆಯಲ್ಲಿದೆ. ಯುನೆಸ್ಕೊ, ಸಾಮುದಾಯಿಕ ಸಹಭಾಗಿತ್ವದ ಪರಿಸರ ಸಂರಕ್ಷಣೆ ಮಾದರಿಯನ್ನು ಗುರುತಿಸಿ, ಉತ್ತಮ ಕೃಷಿ ಪಾರಿಸಾರಿಕ ವ್ಯವಸ್ಥೆ ಎಂದು ಶ್ಲಾಘಿಸಿದೆ. ಪಶ್ಚಿಮ ಘಟ್ಟದ ಅರಣ್ಯ, ನದಿ ಸೇರಿದಂತೆ ಪಾರಿಸಾರಿಕ ಅಧ್ಯಯನ ನಡೆಸಲು, ಕಳೆದ 1980ರ ದಶಕದಿಂದ, ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ ಪರಿಸರ ಅಧ್ಯಯನ ಕೇಂದ್ರ ತೊಡಗಿಕೊಂಡಿದೆ.*

*ಮಾಧವ ಗಾಡ್ಗೀಳ್, ಟಿ.ವಿ.ರಾಮಚಂದ್ರ ಹಾಗೂ ಸುಭಾಸ ಚಂದ್ರನ್ ಮೊದಲಾದ ವಿಜ್ಞಾನಿಗಳು ಗ್ರಾಮ ಅರಣ್ಯ ಸಮಿತಿಗಳಿಗೆ ಬಲ ತುಂಬಿ, ವೃಕ್ಷಲಕ್ಷ ಆಂದೋಲನದ ಸಹಭಾಗಿತ್ವದಲ್ಲಿ, ಸಮುದಾಯ ಆಧಾರಿತ ಅರಣ್ಯ ನಿರ್ವಹಣೆಗೆ ಒತ್ತು ನೀಡುತ್ತಾ ಬಂದಿದ್ದಾರೆ. ಕುಮಟಾ ತಾಲೂಕಿನ ಹಳಕಾರ ಗ್ರಾಮ ಅರಣ್ಯ ಪಂಚಾಯ್ತಿ, ಈಗ ಶತಮಾನೋತ್ಸವ ಸಂಭ್ರಮದಲ್ಲಿದೆ.*

<><><>

ಉತ್ತರಕನ್ನಡ ಜಿಲ್ಲೆ ಶಿರಸಿಯ, ವೃಕ್ಷಲಕ್ಷ ಆಂದೋಲನ ಕರ್ನಾಟಕ ಸಂಸ್ಥೆಯ ನೇತೃತ್ವದಲ್ಲಿ, ಶರಾವತಿ ಕಣಿವೆಯಲ್ಲಿ ಬೃಹತ್ ಯೋಜನೆಗೆ ಅನುಮತಿ ನೀಡಬಾರದು ಎಂದು, ಪರಿಸರ ವಿಜ್ಞಾನಿಗಳು ಆಗ್ರಹಿಸಿದ್ದಾರೆ. ಬರುವ ಜನವರಿ 2ನೇ ವಾರದಲ್ಲಿ, ಗೇರುಸೊಪ್ಪ ಹಾಗೂ ಹೊನ್ನಾವರಗಳಲ್ಲಿ, ಜಾಗೃತಿ ಸಭೆ ಆಯೋಜಿತವಾಗಿದೆ. ಈ ಕುರಿತು ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ನೈಸರ್ಗಿಕ ಸಂಪನ್ಮೂಲಗಳ ಅಂಕಿ-ಸಂಖ್ಯೆ ನಿರ್ವಹಣಾ ಸಂಸ್ಥೆ ನಿರ್ದೇಶಕ ಡಾಕ್ಟರ್ ಪಿ.ಎನ್.ಮೇಸ್ತ.

<><><>

ಡಾ. ಪಿ.ಎನ್. ಮೇಸ್ತ ಧ್ವನಿ 45 ಸೆಕೆಂದುಗಳು

<><><>

ಬಳ್ಳಾರಿ ಹೊರ ವಲಯದ, ನವಶಿಲಾಯುಗದ ನೆಲೆ, ಸಂಗನಕಲ್ಲಿನ ಹಿರೇಗುಡ್ಡದ ಪಕ್ಕದಲ್ಲಿದ್ದ, 5 ಸಾವಿರ ವರ್ಷಗಳ ಹಿಂದಿನ ಬೂದಿ ದಿಬ್ಬವನ್ನು ನಾಶಗೊಳಿಸಿದ ಆರೋಪದ ಮೇಲೆ, ಮೂವರ ವಿರುದ್ಧ ಗ್ರಾಮಾಂತರ ಠಾಣೆಯಲ್ಲಿ, ‘ಕರ್ನಾಟಕ ಪ್ರಾಚೀನ ಸ್ಮಾರಕಗಳು ಮತ್ತು ನೆಲೆಗಳು ಹಾಗೂ ಅವಶೇಷಗಳ ಸಂರಕ್ಷಣಾ ಕಾಯ್ದೆ’ ಅಡಿ, ಪ್ರಕರಣ ದಾಖಲಿಸಲಾಗಿದೆ. ‘ಸಂಗನಕಲ್ಲು, ಸಿರಿವಾರ ಮತ್ತು ಕಪ್ಪಗಲ್ಲು ಗ್ರಾಮಗಳು, ಪ್ರಾಗೈತಿಹಾಸಿಕ ನೆಲೆಗಳಾಗಿದ್ದು, ರಾಜ್ಯ ಸಂರಕ್ಷಿತ ಸ್ಮಾರಕಗಳೆಂದು ಘೋಷಿಸಲಾಗಿದೆ.

<><><>

ಪ್ರದೇಶ ಸಮಾಚಾರಕ್ಕಾಗಿ ಹೆಚ್ಚಿನ ಮಾಹಿತಿ ನೀಡಿದ್ದಾರೆ, ಬಳ್ಳಾರಿಯ ರಾಬರ್ಟ್ ಬ್ರೂಸ್‌ಫುಟ್ ಸಂಗನಕಲ್ಲು ಪ್ರಾಗೈತಿಹಾಸಿಕ ವಸ್ತುಸಂಗ್ರಹಾಲಯದ ವಿಶ್ವಸ್ಥ, ಮತ್ತಿಹಳ್ಳಿ ಅಹಿರಾಜ.

<><><>

ಮತ್ತಿಹಳ್ಳಿ ಅಹಿರಾಜ ಧ್ವನಿ 45 ಸೆಕೆಂದುಗಳು

<><><>

ಈಗ ಜಾಹಿರಾತು..
ನಂತರ ಪ್ರದೇಶ ಸಮಾಚಾರ, ಮುಂದುವರೆಯುವುದು..
(ದಿನದರ್ಶಿಕೆ 10 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ x ಖಾತೆ @airnews_dharwad ಹಾಗೂ

ನಮ್ಮ ಫೇಸ್ಬುಕ್ ಖಾತೆ Airrnu Dharwad ಅನುಸರಿಸಿ.

<><><>

67 ವ ೯ಗಳ ಬಳಿಕ, ಗಡಿನಾಡು ಕಲ್ಯಾಣ ಕರ್ನಾಟಕದ ಬಳ್ಳಾರಿಯಲ್ಲಿ, 88ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ನಡೆಯಲಿದೆ. ಮಂಡ್ಯದಲ್ಲಿ ನಡೆದ ಪರಿ ‘ತ್ತಿನ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಈ ನಿರ್ಧಾರ ಪ್ರಕಟಗೊಂಡಿದೆ ಎಂದು, ಬಳ್ಳಾರಿ ಜಿಲ್ಲೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ನಿಷ್ಠಿ ರುದ್ರಪ್ಪ ತಿಳಿಸಿದ್ದಾರೆ.

<><><>

1926ರ ಮೇ 22 ರಿಂದ 24ರ ವರೆಗೆ, 12ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಬಳ್ಳಾರಿಯಲ್ಲಿ ನಡೆದಿತ್ತು. ವಚನ ಪಿತಾಮಹ ಫಕೀರಪ್ಪ ಗುರುಬಸಪ್ಪ ಹಳಕಟ್ಟಿ ಸರ್ವಾಧ್ಯಕ್ಷತೆ ವಹಿಸಿದ್ದರು.

<><><>

ಬಳಿಕ 12 ವ ೯ಗಳ ನಂತರ, 1938ರ ಡಿಸೆಂಬರ್ 29 ರಿಂದ 31ರ ವರೆಗೆ, 23ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಆರ್.ಆರ್.ದಿವಾಕರ್ ಅವರ ಸರ್ವಾಧ್ಯಕ್ಷತೆಯಲ್ಲಿ ನಡೆದಿತ್ತು.

<><><>

ಬಳಿಕ 28 ವ ೯ಗಳ ನಂತರ, 1958ರ ಜನವರಿ 18 ರಿಂದ 20ರ ವರೆಗೆ, ವಿ.ಕೃ.ಗೋಕಾಕ ಅವರ ಅಧ್ಯಕ್ಷತೆಯಲ್ಲಿ, ಬಳ್ಳಾರಿ ನಗರದ ಮುನ್ಸಿಪಲ್ ಕಾಲೇಜು ಮೈದಾನದಲ್ಲಿ ನಡೆಯಿತು.

<><><>

‘ಹೆಣ್ಣು ಮಗುವೊಂದು ಕಲಿತರೆ, ಶಾಲೆಯೊಂದು ತೆರೆದಂತೆ’ ಎಂದು, ಕೇಂದ್ರದ ನವ ಹಾಗೂ ನವೀಕರಿಸಬಹುದಾದ, ಇಂಧನಗಳ ಖಾತೆ ಸಚಿವ, ಪ್ರಲ್ಹಾದ ಜೋಶಿ ಹೇಳಿದ್ದಾರೆ. ಧಾರವಾಡ ತಾಲೂಕಿನ ಹೆಬ್ಬಳ್ಳಿ ಗ್ರಾಮದ, ಸರ್ಕಾರಿ ಹಿರಿಯ ಪ್ರಾಥಮಿಕ ಹೆಣ್ಣು ಮಕ್ಕಳ ಶಾಲೆಯಲ್ಲಿ, 4 ಶಾಲಾ ಕೊಠಡಿಗಳ ನಿರ್ಮಾಣಕ್ಕೆ ಭೂಮಿ ಪೂಜೆ ಹಾಗೂ 125 ಮೇಜುಗಳ ವಿತರಣಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಅವರು ಮಾತನಾಡಿದರು. ಸಂಸದ ಜೋಶಿ ಅವರ ಪ್ರಸ್ತಾವದ ಮೇರೆಗೆ, ಎನ್.ಟಿ.ಪಿ.ಸಿ. ಕಂಪೆನಿ, ಕಾರ್ಪೋರೇಟ್ ಸಾಮಾಜಿಕ ಹೊಣೆಗಾರಿಕೆ ನಿಧಿ ಅಡಿ, 54 ಲಕ್ಷ ರೂಪಾಯಿ ಈ ಶಾಲೆಗೆ ಅನುದಾನ ಒದಗಿಸಿದೆ.

<><><>

ರಾಜ್ಯದ ಅಲೆಮಾರಿ ಹಾಗೂ ಅರೆ ಅಲೆಮಾರಿ ಸಮುದಾಯಗಳಿಗೆ, ಸ್ವಾವಲಂಬಿ ಹಾಗೂ ಸ್ಥಿರವಾದ ಬದುಕು ಕಟ್ಟಿಕೊಡುವ ನಿಟ್ಟಿನಲ್ಲಿ, ಟೆಂಟ್ ಮುಕ್ತ ರಾಜ್ಯವನ್ನಾಗಿಸಲು ಸಂಕಲ್ಪಿಸಲಾಗಿದೆ ಎಂದು, ಪರಿಶಿ ೃ ಜಾತಿ ಮತ್ತು ಪರಿಶಿ ೃ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಜಿ.ಪಲ್ಲವಿ ತಿಳಿಸಿದ್ದಾರೆ. ದಾವಣಗೆರೆ ಜಿಲ್ಲೆ, ಜಗಳೂರು ತಾಲೂಕಿನ ಕೊರಚರಹಟ್ಟಿ, ಅಶ್ವತ್ಥ ರೆಡ್ಡಿ ನಗರದ ಬಳಿ, ಸಿಂಧೋಳ್ ಸಮುದಾಯಗಳ ಟೆಂಟ್‌ಗಳಿಗೆ ಭೇಟಿ ನೀಡಿ, ಅಹವಾಲು ಆಲಿಸಿದರು. ರಾಜ್ಯ

ಸರ್ಕಾರ 99 ಅಲೆಮಾರಿ ಸಮುದಾಯಗಳಿಗೆ, ಸಾಮಾಜಿಕ ನ್ಯಾಯ ಹಾಗೂ ಆರ್ಥಿಕ ಸಬಲೀಕರಣ ಒದಗಿಸಲು, ಬದ್ಧವಾಗಿದೆ ಎಂದರು.

<><><>

ತೋಟಗರಿಗೆ ಹೊಸ ತಳಿಗಳ ಅವಿ ್ಕರಗಳ ಬಗ್ಗೆ, ಮಾಹಿತಿ ನೀಡಿ, ಇಳುವರಿ ಮತ್ತು ಆದಾಯ ಹೆಚ್ಚಿಸಲು, ತೋಟಗಾರಿಕೆ ವಿಶ್ವವಿದ್ಯಾಲಯ ವಿಶೇಷ ಪ್ರಯತ್ನ ಕೈಗೊಳ್ಳಬೇಕು ಎಂದು, ರಾಜ್ಯಸಭಾ ಸಂಸದ ನಾರಾಯಣಸಾ ಭಾಂಡಗೆ ಹೇಳಿದ್ದಾರೆ. ಬಾಗಲಕೋಟೆಯ, ತೋಟಗಾರಿಕೆ ವಿಶ್ವ ವಿದ್ಯಾಲಯದ, ಉದ್ಯಾನಗಿರಿಯಲ್ಲಿ ಆಯೋಜಿತ, ತೋಟಗಾರಿಕೆ ಮೇಳದ ಎರಡನೇ ದಿನ, 8 ಜಿಲ್ಲೆಯ ಫಲಶ್ರೇ ್ಠ ರೈತರನ್ನು ಸನ್ಮಾನಿಸಿ ಅವರು, ಮಾತನಾಡಿದರು.

<><><>

ವಿಧಾನ ಪರಿ ‘ತ್ ಶಾಸಕ ಪಿ.ಎಚ್.ಪೂಜಾರ ಮಾತನಾಡಿ, ಬಾಗಲಕೋಟೆ, ವಿಜಯಪುರ ಜಿಲ್ಲೆಗಳಲ್ಲಿ, ಅಧಿಕ ಪ್ರಮಾಣದಲ್ಲಿ ದಾಳಿಂಬೆ, ಮಾವು, ದ್ರಾಕ್ಷಿ ಹಾಗೂ ಚಿಕ್ಕು ಹಣ್ಣುಗಳನ್ನು ಬೆಳೆಯಲಾಗುತ್ತದೆ ಎಂದರು.

<><><>

ಮಾಜಿ ಪ್ರಧಾನಮಂತ್ರಿ ಚೌಧರಿ ಚರಣಸಿಂಗ್ ಅವರ ಜನ್ಮದಿನವಾದ ಇಂದು, ರಾಷ್ಟ್ರೀಯ ರೈತರ ದಿನಾಚರಣೆ, ‘ಕಿಸಾನ್ ದಿವಸ್’ ದೇಶಾದ್ಯಂತ ಆಯೋಜಿತವಾಗಿದೆ.

<><><>

ಕೇಂದ್ರ ಗೃಹ ಮಂತ್ರಾಲಯದ ನಿರ್ದೇಶನದನ್ವಯ, ಬೆಂಗಳೂರಿನ ಯಲಹಂಕದಲ್ಲಿರುವ, ಗಡಿ ರಕ್ಷಣಾ ಪಡೆಯ, ಉಪ ತರಬೇತಿ ಕೇಂದ್ರದಲ್ಲಿ, ಇಂದು ಬೆಳಗ್ಗೆ 8.30ಕ್ಕೆ, 14ನೇ ರೋಜಗಾರ್ ಮೇಳ ಆಯೋಜಿಸಲಾಗಿದೆ. ಕೇಂದ್ರದ ಕಾರ್ಮಿಕ ಹಾಗೂ ಉದ್ಯೋಗ ಸಚಿವಾಲಯದ ರಾಜ್ಯ ಖಾತೆ ಸಚಿವರಾದ ಶೋಭಾ ಕರಂದ್ಲಾಜೆ, ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ನಾಲ್ಕನೇ ಸುಶಾಸನ ಮಾಸಾಚರಣೆ, ಇಂದಿನಿಂದ ಆಚರಿಸಲಾಗುತ್ತಿದೆ.

<><><>

ಕಲ್ಯಾಣ ಕರ್ನಾಟಕಕ್ಕೆ ಪ್ರತ್ಯೇಕ ಸಚಿವಾಲಯ ರಚಿಸುವ ಚಿಂತನೆ ನಡೆದಿದೆ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ಕಲಬುರಗಿಯಲ್ಲಿ ತಿಳಿಸಿದ್ದಾರೆ.

<><><>

ಕಲಬುರಗಿಯಲ್ಲಿ ಜಯದೇವ ಹೃದ್ರೋಗ ಆಸ್ಪತ್ರೆಯನ್ನು, ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ರಾಜ್ಯಸಭೆ ವಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ ಉದ್ಘಾಟಿಸಿದರು.

<><><>

ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ, ಸಿ.ನಾಗಣ್ಣ ಗೌಡ ಅವರು, ಇಂದು ಬೆಳಗ್ಗೆ 10.30ಕ್ಕೆ, ಚಿಕ್ಕಬಳ್ಳಾಪುರಕ್ಕೆ ಭೇಟಿ ನೀಡಿ, ಶಿಕ್ಷಣ ಹಕ್ಕು ಕಾಯ್ದೆ ಅನು ್ಠಾನದ ಕುರಿತು ಪರಿಶೀಲಿಸಲಿದ್ದಾರೆ.

<><><>

ಅಪರಾಧ ತಡೆ ಮಾಸಾಚರಣೆ ಅಂಗವಾಗಿ, ಮ್ಯಾರಥಾನ್‌ಗೆ, ಚಿತ್ರದುರ್ಗ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಣಜೀತ ಭಂಡಾರು ಹಾಗೂ ಶಾಸಕ ಕೆ.ಸಿ. ವೀರೇಂದ್ರ ಚಾಲನೆ ನೀಡಿದರು.

<><><>

ಶಿವಮೊಗ್ಗದ, ತ್ಯಾವರೆಕೊಪ್ಪ ಹುಲಿ–ಸಿಂಹಧಾಮ, ನಾಳೆ ಮತ್ತು 31 ರಂದು ಎರಡೂ ಮಂಗಳವಾರ, ರಜೆ ದಿನವಾದರೂ, ವೀಕ್ಷಣೆಗೆ ತೆರೆದಿರಲಿದೆ ಎಂದು, ಮೃಗಾಲಯದ ಕಾರ್ಯ ನಿರ್ವಾಹಕ ನಿರ್ದೇಶಕರು ತಿಳಿಸಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಜನ ಸಹಭಾಗಿತ್ವದಲ್ಲಿ ಅರಣ್ಯ ನಿರ್ವಹಣೆಯ ಮಾದರಿ, ಉತ್ತರಕನ್ನಡ ಜಿಲ್ಲೆ, ಹಳಕಾರ ಗ್ರಾಮ ಅರಣ್ಯ ಪಂಚಾಯ್ತಿಗೆ, ಶತಮಾನೋತ್ಸವ.
- ಶರಾವತಿ ಕಣಿವೆಯಲ್ಲಿ, ಬೃಹತ್ ಯೋಜನೆ ಅನುಮೋದಿಸದಂತೆ, ಪರಿಸರ ವಿಜ್ಞಾನಿಗಳ ಆಗ್ರಹ.
- 'ಹೆಣ್ಣು ಮಗುವೊಂದು ಕಲಿತರೆ, ಶಾಲೆಯೊಂದು ತೆರೆದಂತೆ' – ಕೇಂದ್ರ ಸಚಿವ ಪ್ರಲ್ಹಾದ ಜೋಶಿ.
- ರಾಜ್ಯದ ಅಲೆಮಾರಿ ಹಾಗೂ ಅರೆ ಅಲೆಮಾರಿ ಸಮುದಾಯಗಳಿಗೆ, ಸ್ವಾವಲಂಬಿ ಬದುಕು; ಅಲೆಮಾರಿ ಅಭಿವೃದ್ಧಿ ನಿಗಮದ ಸಂಕಲ್ಪ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>

ಹರ್ಷ